# ಜೂ.13ರಿಂದ ತರಬೇತಿ

**ಹಳಿಯಾಳ:** ಕೆಎಲ್‌ಎಸ್ ವಿಡಿಐಟಿ ಹಳಿಯಾಳವು ಡಿಪ್ಲೋಮಾ ಮುಗಿಸಿ ಎಂಜಿನಿಯರಿಂಗ್ ಪದವಿ ಆಕಾಂಕ್ಷಿಗಳಿಗೆ ಡಿಪ್ಲೋಮಾ ಸಿಇಟಿ ಪರೀಕ್ಷೆಗೆ ತರಬೇತಿ ಹಾಗೂ ಅಣಕು ಪರೀಕ್ಷೆ ಆಯೋಜಿಸಿದೆ. ಜೂನ್ 13ರಿಂದ 18ರ ವರೆಗೆ ಆನ್‌ಲೈನ್ ಮುಖಾಂತರ ಡಿಪ್ಲೋಮಾ ಸಿಇಟಿ ಪರೀಕ್ಷೆಗೆ ತರಬೇತಿಯನ್ನು ಮಹಾವಿದ್ಯಾಲಯದ ನುರಿತ ಶಿಕ್ಷಕರು ನೀಡಲಿದ್ದಾರೆ. ಜೂನ್ 19 ಮತ್ತು 20ರಂದು ಡಿಸಿಇಟಿ ಅಣಕು ಪರೀಕ್ಷೆಯನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿ ಪಡೆಯಲು ಪ್ರೊ.ರವಿಕುಮಾರ್ ತಲಪಾಟಿ (9740351673), ಪ್ರೊ.ಸಂತೋಷ್ ಸವಣೂರ್(9611681828) ಇವರನ್ನು ಸಂಪರ್ಕಿಸಲು ತಿಳಿಸಿದೆ. ಡಿಸಿಇಟಿ ಪರೀಕ್ಷಾ ಆಕಾಂಕ್ಷಿಗಳಿಗೆ ಅನುಕೂಲಕರವಾಗಲೆಂದು ಆಯೋಜಿಸುತ್ತಿದೆ ಎಂದು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ತಿಳಿಸಿದ್ದಾರೆ.

# ವೇದಗಣಿತ ಕಲಿಕೆಯಿಂದ ಆಲೋಚನಾಶಕ್ತಿ ಹೆಚ್ಚಳ

**ಹಳಿಯಾಳ:** ವೇದಗಣಿತವನ್ನು ಕಲಿಯುವುದರಿಂದ ವಿದ್ಯಾರ್ಥಿಗಳು ತಮ್ಮ ಆಲೋಚನಾಶಕ್ತಿ ಮತ್ತು ನೆನಪಿನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ ಎಂದು ಬೆಳಗಾವಿಯ ವೇದಗಣಿತ ಪರಿಣತ ಅಂಕುಶ ದುರ್ಗಿ ಹೇಳಿದರು. ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ವೇದಗಣಿತ ಹಾಗೂ ವ್ಯಕ್ತಿತ್ವ ವಿಕಸನ ಕುರಿತು ಇತ್ತೀಚೆಗೆ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಟಿಲವಾದ ಗಣಿತದ ಲೆಕ್ಕವನ್ನು ವೇದ ಗಣಿತದ ಮುಖಾಂತರ ಸುಲಭವಾಗಿ ಪರಿಹರಿಸುವ ವಿಧಾನವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟ ಅವರು, ವೇದ ಗಣಿತ ವಿದ್ಯಾರ್ಥಿಗಳ ಆಲೋಚನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಓದುವ ಹಾಗೂ ಬರವಣಿಗೆಯ ಹವ್ಯಾಸಗಳು ವ್ಯಕ್ತಿತ್ವ ವಿಕಸನಕ್ಕೆ ಸಹಾಯಕವಾಗುತ್ತವೆ ಎಂದರು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ವಿ ಎ ಕುಲಕರ್ಣಿ, ಡಾ. ಸಮೀರ ಗಲಗಲಿ, ಡಾ. ರವೀಂದ್ರ ಮುನ್ನೋಳ್ಳಿ, ಡಾ. ಸುಬ್ರಹ್ಮಣ್ಯ ಎಸ್., ಆವಿಷ್ಕಾರ ಪರಿಷತ್ತಿನ ಅಧ್ಯಕ್ಷ ಡಾ. ಮಹೇಂದ್ರ ದೀಕ್ಷಿತ್, ಪ್ರೊ. ಸುಧೀಂದ್ರ ಯಲಗೂರ ಉಪಸ್ಥಿತರಿದ್ದರು.




ಹಳಿಯಾಳದಲ್ಲಿ ಆಯೋಜಿಸಿದ್ದ ವೇದಗಣಿತ ಹಾಗೂ ವ್ಯಕ್ತಿತ್ವ ವಿಕಸನ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ವೇದಗಣಿತ ಪರಿಣತ ಅಂಕುಶ ದುರ್ಗಿ ಅವರನ್ನು ಗೌರವಿಸಲಾಯಿತು. ಡಾ. ಸಮೀರ ಗಲಗಲಿ, ಡಾ. ರವೀಂದ್ರ ಮುನ್ನೋಳ್ಳಿ, ಡಾ. ಸುಬ್ರಹ್ಮಣ್ಯ ಎಸ್., ಡಾ. ಮಹೇಂದ್ರ ದೀಕ್ಷಿತ್, ಇದ್ದರು.

ಲೋಕಧ್ವನಿ
ಸಾಮೀಪ್ಯವೇ ಆಪ್ತ

# ಜೂನ್ 13 ರಿಂದ ಡಿಸಿಇಟಿ ತರಬೇತಿ

ಶಿರಸಿ: ಕೆಎಲ್‌ಎಸ್ ವಿಡಿಐಟಿ ಹಳಿಯಾಳವು ಡಿಪ್ಲೋಮಾ ಇಂಜಿನಿಯರಿಂಗ್ ಪದವಿ ಆಕಾಂಕ್ಷಿಗಳಿಗೆ ಡಿಪ್ಲೋಮಾ ಸಿಇಟಿ ಪರೀಕ್ಷೆಗೆ ತರಬೇತಿ ಹಾಗೂ ಅಣಕು ಪರೀಕ್ಷೆ ಆಯೋಜಿಸಿದೆ.

ಜೂನ್ 13 ರಿಂದ 18 ರವರೆಗೆ ಆನ್ಲೈನ್ ಮುಖಾಂತರ ಡಿಪ್ಲೋಮಾ ಸಿಇಟಿ ಪರೀಕ್ಷೆಗೆ ತರಬೇತಿಯನ್ನು ಮಹಾವಿದ್ಯಾಲಯದ ನುರಿತ ಶಿಕ್ಷಕರು ನೀಡಲಿದ್ದಾರೆ.

ಜೂನ್ 19 ಮತ್ತು 20ರಂದು ಡಿಸಿಇಟಿ ಅಣಕು ಪರೀಕ್ಷೆ ಆಯೋಜಿಸಲಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆಯಲು ಪ್ರೊ. ರವಿಕುಮಾರ್ ತಲಪಾಟಿ (9740351673), ಪ್ರೊ. ಸಂತೋಷ್ ಸವಣೂರ್ (9611681828) ಇವರನ್ನು ಸಂಪರ್ಕಿಸಲು ತಿಳಿಸಿದೆ. ಡಿಸಿಇಟಿ ಪರೀಕ್ಷಾ ಆಕಾಂಕ್ಷಿಗಳಿಗೆ ಅನುಕೂಲಕರವಾಗಲೆಂದು ಉಚಿತವಾಗಿ ತರಬೇತಿ ಹಾಗೂ ಅಣಕು ಪರೀಕ್ಷೆಯನ್ನು ಮಹಾವಿದ್ಯಾಲಯ ಪ್ರತಿ ವರ್ಷ ಆಯೋಜಿಸುತ್ತಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬೇಕೆಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ತಿಳಿಸಿದ್ದಾರೆ.

Main Edition
Jun 11, 2024 Page No. 5